# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 166 | Pages. 2 | Date: 09-06-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 166 - ಪುಟಗಳು : 2 | 09-06-2026 | ಮಂಗಳವಾರ | Ph: 8762954248 | ದರ : ₹1


# ಹಾಸನದಲ್ಲಿ ತಡರಾತ್ರಿ ರೌಡಿ ಶೀಟರ್ ಕೊಲೆ

## ಬೆಂಗಳೂರು ಮೂಲದ ಮಂಜೇಶ್‌ಕುಮಾರ್ ಮೃತ । ತನಿಖೆ ಕೈಗೊಂಡ ಪೊಲೀಸರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಜಿಲ್ಲಾ ನ್ಯಾಯಾಲಯ ಮುಂಭಾಗದ ರಸ್ತೆಯಲ್ಲಿ ಭಾನುವಾರ ರಾತ್ರಿ ರೌಡಿ ಶೀಟರ್ ಕೊಲೆಯಾಗಿದ್ದು ಹಳೆಯ ದ್ವೇಷದಿಂದ ಪರಿಚಯಸ್ಥರೇ ಕೃತ್ಯ ಎಸಗಿರುವ ಸಂಶಯ ವ್ಯಕ್ತವಾಗಿದೆ.

ಬೆಂಗಳೂರಿನ ರೌಡಿಶೀಟರ್ ಮಂಜೇಶ್‌ಕುಮಾರ್ (42) ಮೃತ ವ್ಯಕ್ತಿ. ಬೆಂಗಳೂರಿನ ಅವಲಹಳ್ಳಿಯ ಈತ ಭಾನುವಾರ ಚಿಕ್ಕಮಗಳೂರಿಗೆ ಬಂದಿದ್ದ. ತಡರಾತ್ರಿ ಹಾಸನಕ್ಕೆ ಏಕೆ ಬಂದಿದ್ದ, ಕೊಲೆಗೈದಿದ್ದು ಯಾರು ಎಂಬ ಪ್ರಶ್ನೆ ಉದ್ಭವಿಸಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು, ಆರೋಪಿಗಳ ಪತ್ತೆಗೆ ಬಲೆ ಬೀಸಲಾಗಿದೆ ಎಂದರು.

ಮಂಜೇಶ್ ವಿರುದ್ಧ ಬೆಂಗಳೂರು ದಕ್ಷಿಣ ಪಶ್ಚಿಮ ವಲಯ ಠಾಣೆಯಲ್ಲಿ ರೌಡಿ ಶೀಟರ್ ಖಾತೆ ತೆರೆಯಲಾಗಿತ್ತು. 2012, 2013, 2020ರಲ್ಲಿ ಮಂಜೇಶ್ ವಿರುದ್ಧ ಕೊಲೆ ಪ್ರಕರಣ ದಾಖಲಾಗಿತ್ತು. ಇಷ್ಟು ಮಾತ್ರವಲ್ಲದೆ






ಕೊಲೆ ಯತ್ನ, ಜಾತಿ ನಿಂದನೆ ಸೇರಿ 7 ಪ್ರಕರಣದ ಆರೋಪಿಯಾಗಿದ್ದ. ಹೀಗಾಗಿ 2026ರ ಮೇ 13ರಂದು ಈತನನ್ನು ಚಿಕ್ಕಮಗಳೂರು ಜಿಲ್ಲೆಗೆ ಗಡಿಪಾರು ಮಾಡಿ ಬೆಂಗಳೂರು ಪೊಲೀಸರು ಆದೇಶಿಸಿದ್ದರೆಂದು ಮಾಹಿತಿ ನೀಡಿದರು.

ಮಧ್ಯರಾತ್ರಿ 3 ಗಂಟೆ ಸಮಯದಲ್ಲಿ 112 ಸಹಾಯವಾಣಿಗೆ ಸಾರ್ವಜನಿಕರು ಅಪರಿಚಿತ ಶವ ಪತ್ತೆಯಾಗಿರುವ ಬಗ್ಗೆ ಮಾಹಿತಿ ನೀಡಿದಾಗ ಗಸ್ತು ಸಿಬ್ಬಂದಿಗೆ ಸ್ಥಳಕ್ಕೆ ದೌಡಾಯಿಸಿದ್ದಾರೆ. ರಕ್ತಸಿಕ್ತ ಶವದ ಪಕ್ಕದಲ್ಲೇ ಪರ್ಸ್ ಕಂಡಿದ್ದು ಅದನ್ನು ಪರಿಶೀಲಿಸಿದಾಗ ಆಧಾರ್ ಹಾಗೂ ಪಾನ್ ಕಾರ್ಡ್‌ಗಳು ಸಿಕ್ಕಿವೆ. ಜೊತೆಗೆ ಜೈಲು ಶಿಕ್ಷೆಗೆ ಒಳಗಾದವರಿಗೆ ನೀಡುವ ಯುಟಿಪಿ ನಂಬರ್ ಕಾರ್ಡ್ ಸಹ ಇದ್ದಿದ್ದರಿಂದ ಪೊಲೀಸರಿಗೆ ಮಂಜೇಶ್‌ನ ಪೂರ್ವಾಪರ ತಕ್ಷಣಕ್ಕೆ ತಿಳಿದುಬಂದಿದೆ.

ಜಿಲ್ಲಾ ನ್ಯಾಯಾಲಯ ಮುಂಭಾಗ ಮಚ್ಚು, ಲಾಂಗ್‌ನಿಂದ ಮನಸೋಇಚ್ಛೆ ಹಲ್ಲೆ ನಡೆಸಿದ್ದಾರೆ. ಬಲಗೈ ತುಂಡಾಗಿ ಪಕ್ಕದಲ್ಲೇ ಬಿದ್ದಿದೆ. ಎಡಗೈನ ಬೆರಳು ಕತ್ತರಿಸಿದೆ. ಹೊಟ್ಟೆಗೂ ಗಂಭೀರ ಪೆಟ್ಟಾಗಿದೆ. ಹಳೆಯ ದ್ವೇಷದಿಂದ ಪರಿಚಯಸ್ಥರೇ ಕೃತ್ಯ ಎಸಗಿದ್ದಾರೆ. ಕೊಲೆ ಪ್ರಕರಣದಲ್ಲಿ ಹಾಸನದವರು ಯಾರೂ ಇಲ್ಲ.

> ಮೊಸಳೆಹೊಸಹಳ್ಳಿ ಸರ್ಕಾರಿ ಎಂಜಿನಿಯರಿಂಗ್ ಹಾಗೂ ವಿವಿಧ ಕಾಲೇಜುಗಳಿದ್ದು ಅಲ್ಲಿನ ವಿದ್ಯಾರ್ಥಿಗಳೇ ಈತನ ಗ್ರಾಹಕರಾಗಿರಬಹುದು. ಯುವ ಸಮುದಾಯವನ್ನು ದುಶ್ಚಟಕ್ಕೆ ತಳ್ಳುವ ವ್ಯವಸ್ಥಿತ ಜಾಲ ಇಲ್ಲಿ ಕೆಲಸ ಮಾಡುತ್ತಿರುವ ಸಾಧ್ಯತೆಯಿದೆ. ಎಲ್ಲಾ ಆಯಾಮಗಳಿಂದಲೂ ಪ್ರಕರಣದ ತನಿಖೆ ನಡೆಸಲಾಗುತ್ತಿದೆ.
>
> **– ಶುಭನ್ವಿತಾ, ಎಸ್ಪಿ**

ತನಿಖೆ ನಡೆಯುತ್ತಿದ್ದು ಶೀಘ್ರವೇ ಆರೋಪಿಗಳನ್ನು ಬಂಧಿಸಲಾಗುವುದು ಎಂದರು.

ಸಾರ್ವಜನಿಕ ಪ್ರದೇಶದಲ್ಲೇ ಭೀಕರವಾಗಿ ಕೊಲೆಯಾಗಿ ಹೋಗಿರುವುದು ಸ್ಥಳೀಯರನ್ನು ಬೆಚ್ಚಿ ಬೀಳಿಸಿದೆ. ಸುದ್ದಿ ತಿಳಿದ ಕೂಡಲೇ ನಗರ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದರು. ಜೊತೆಗೆ ಸ್ಥಳೀಯರಿಂದ ಮಾಹಿತಿ ಪಡೆದರು. ಹಿಮ್ಸ್‌ನಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

## 42 ಕೆ.ಜಿ. ತೂಕದ ಗಾಂಜಾ ವಶಕ್ಕೆ



ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ 21 ಲಕ್ಷ ರೂ. ಮೌಲ್ಯದ 42 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಮಂಡ್ಯ ಜಿಲ್ಲೆ ಪಾಂಡವಪುರದ ಅಲಿಮುಲ್ಲಾ ಷರೀಫ್ ಬಂಧಿತ ಆರೋಪಿ. ಒಡಿಸ್ಸಾದಿಂದ ಮೈಸೂರಿಗೆ ಸಂಪರ್ಕಿಸುವ ಟಾಟಾ ನಗರ್ ಎಕ್ಸಪ್ರೆಸ್ ರೈಲಿನಲ್ಲಿ ಗಾಂಜಾ ತರಲಾಗಿತ್ತು. ಮೊಸಳೆಹೊಸಹಳ್ಳಿಯ ಎಪಿಎಂಸಿ ಯಾರ್ಡ್‌ನಲ್ಲಿ ಪದಾರ್ಥ ಸಂಗ್ರಹಿಸಿಟ್ಟಿದ್ದ ಷರೀಫ್ 9 ಪ್ಯಾಕೆಟ್‌ಗಳನ್ನು ಮಾರಾಟಕ್ಕೆಂದು ತನ್ನ ಬಳಿ ಇಟ್ಟುಕೊಂಡಿದ್ದ. ಆತನ ಬಳಿಯಿದ್ದ 600 ರೂ. ವಶಪಡಿಸಿಕೊಳ್ಳಲಾಗಿದೆ. ಖಚಿತ ಮಾಹಿತಿ ಮೇರೆಗೆ ಶಾಂತಿಗ್ರಾಮ ಪೊಲೀಸರು ದಾಳಿ ನಡೆಸಿದಾಗ ಕೃತ್ಯ ಬಯಲಾಗಿದೆ. ಹಾಸನ ಮಾತ್ರವಲ್ಲದೆ ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಗಳಿಗೂ ಇಲ್ಲಿಂದಲೇ ಗಾಂಜಾ ಸಾಗಾಟವಾಗುತ್ತಿದ್ದ ಸಂಶಯ ಇದೆ. ಒಬ್ಬ ಮಾತ್ರ ಸೆರೆ ಸಿಕ್ಕಿದ್ದು ವಿಚಾರಣೆ ಬಳಿಕ ಇನ್ನಷ್ಟು ಜನರ ಹೆಸರು ಹೊರಬರುವ ಸಾಧ್ಯತೆಯಿದೆ ಎಂದು ಶುಭಾನ್ವಿತಾ ಹೇಳಿದರು.

## ಬೆಟ್ಟದ ಭೈರವೇಶ್ವರ ದೇಗುಲದಲ್ಲಿ ಜಾಗೃತಿಗೆ ಬ್ಯಾನರ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಬೆಟ್ಟದ ಭೈರವೇಶ್ವರ ದೇವಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವ ಭಕ್ತರು ಹಾಗೂ ಪ್ರವಾಸಿಗರ ಅನುಕೂಲಕ್ಕಾಗಿ ಗ್ರಾಮಾಂತರ ಪೊಲೀಸ್ ಠಾಣೆ ವತಿಯಿಂದ ಜಾಗೃತಿ ಮೂಡಿಸುವ ಬ್ಯಾನರ್ ಅಳವಡಿಸಲಾಯಿತು.

ದೇವಾಲಯದ ಆವರಣದಲ್ಲಿ ಸ್ವಚ್ಛತೆ ಕಾಪಾಡುವ ಉದ್ದೇಶದಿಂದ ಪಾದರಕ್ಷೆಗಳನ್ನು ಹೊರಗೆ ಬಿಡಿ, ಸ್ವಚ್ಛತೆ ಕಾಪಾಡಿ, ಸಂಯಮದಿಂದ ವರ್ತಿಸಿ, ಬೆಲೆ ಬಾಳುವ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸಿ ಮತ್ತು ವಾಹನಗಳನ್ನು ನಿಗದಿತ ಸ್ಥಳದಲ್ಲೇ ನಿಲುಗಡೆ ಮಾಡಿ ಎಂಬ ಸಂದೇಶಗಳಿರುವ ಬ್ಯಾನರ್ ಅಳವಡಿಸಿ ಭಕ್ತರಿಗೆ ಅಗತ್ಯ ಮಾಹಿತಿ ನೀಡಲಾಯಿತು.

ಕಳೆದ ಕೆಲವು ತಿಂಗಳ ಹಿಂದೆ ಫೋಟೋ ಶೂಟ್ ವಿಷಯವಾಗಿ ಸ್ಥಳೀಯರು ಹಾಗೂ ಛಾಯಾಗ್ರಾಹಕರ ತಂಡದ ನಡುವೆ ದೇವಸ್ಥಾನದ ನಿಯಮ ಪಾಲನೆ ಮಾಡುವ ವಿಷಯವಾಗಿ ವಾದ ವಿವಾದ ನಡೆದು ಕೊನೆಗೆ ರಾದ್ಧಾಂತವಾಗಿತ್ತು. ಬಳಿಕ ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಸ್ಥಳೀಯರೊಂದಿಗೆ ಸುದೀರ್ಘ ಚರ್ಚೆ ನಡೆಸಿ ಅಗತ್ಯ ಕ್ರಮ ಕೈಗೊಂಡಿದ್ದರು.

ಗ್ರಾಮಾಂತರ ಠಾಣೆ ಎಎಸ್ಐ ವಿಜಯಕುಮಾರ್, ಸಿಬ್ಬಂದಿ ರಾಜು, ಸುಭಾಷ್ ಬಿರಾದಾರ ಹಾಗು ನವೀನ್ ಅವರು ದೇವಾಲಯಕ್ಕೆ ಆಗಮಿಸುವ ಭಕ್ತರು ಹಾಗೂ ಪ್ರವಾಸಿಗರು ನಿಯಮಗಳನ್ನು ಪಾಲಿಸುವ ಮೂಲಕ ಸುಗಮ ಹಾಗೂ ಸುರಕ್ಷಿತ ವಾತಾವರಣ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ದೇವಾಲಯದ ಪಾವಿತ್ರ್ಯವನ್ನು ಕಾಪಾಡುವುದರ ಜೊತೆಗೆ ಭಕ್ತರ ಸುರಕ್ಷತೆ ಮತ್ತು ಅನುಕೂಲವನ್ನು ಗಮನದಲ್ಲಿಟ್ಟುಕೊಂಡು ಈ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಸಾರ್ವಜನಿಕರಾದ ಎತ್ತಿನಹೊಳೆ ಜೆ.ಎಸ್.ಹೇಮಂತ್, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಅರವಿಂದ್ ಅಚ್ಚನಹಳ್ಳಿ ಮತ್ತಿತರರಿದ್ದರು.

# ನಿಟ್ಟೂರಿನಲ್ಲಿ ದಲಿತರ ಭೂಮಿ ಕಬಳಿಕೆ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ನಿಟ್ಟೂರು ಗ್ರಾಮದ ದಲಿತ ಮಹಿಳೆಯರ ಭೂಮಿಯನ್ನು ಪ್ರಭಾವಿಗಳು ನಕಲಿ ದಾಖಲೆ ಸೃಷ್ಟಿಸಿ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದು ಬಿಎಸ್‌ಪಿಯ ಶಿವಮ್ಮ ಆಗ್ರಹಿಸಿದರು.




ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಗ್ರಾಮದ ಸರ್ವೆ ನಂ 246/1 ಮತ್ತು 246/4 ರಲ್ಲಿ 1 ಎಕರೆ 17 ಗುಂಟೆ ಜಮೀನಿದ್ದು, ಶಾಂತಮ್ಮ, ಲಕ್ಷ್ಮಮ್ಮ ಸಹೋದರಿಯರಿಗೆ ಸೇರಿದೆ. ಅವರ ತಾತ ಕರಿಯಯ್ಯ, ಬಸವಶೆಟ್ಟಿ ಎಂಬುವವರಿಂದ ಖರೀದಿ ಮಾಡಿದ್ದರು. ನಂತರ 1956ರಲ್ಲಿ ಚಲುವಶೆಟ್ಟಿ ಎಂಬುವವರಿಗೆ ಕೇವಲ 50 ರೂ.ಅಡಮಾನ ಇಡಲಾಗಿತ್ತು. ಆಗಿನಿಂದಲೂ ಭೂಮಿ ದಲಿತ ಮಹಿಳೆಯರ ಸ್ವಾಧೀನದಲ್ಲೇ ಇದೆ. ದಶಕಗಳಿಂದಲೂ ಉಳುಮೆ ಮಾಡಿಕೊಂಡು ಬರುತ್ತಿರುವ ಭೂಮಿಯನ್ನು ಇತ್ತೀಚೆಗೆ ಅಕ್ರಮವಾಗಿ ರಿಯಲ್ ಎಸ್ಟೇಟ್‌ನವರಿಗೆ ಮಾರಾಟ ಮಾಡಲಾಗಿದೆ ಎಂದು ದೂರಿದರು. ಪಕ್ಕದ ಜಮೀನಿನ ಗೌರಮ್ಮ ಎಂಬುವವರು ತಮ್ಮಂತೆ ಖಾತೆ ಮಾಡಿಕೊಂಡು, ರಿಯಲ್ ಎಸ್ಟೇಟ್ ನಡೆಸುತ್ತಿರುವ ಟಿ.ಆರ್.ಸಾಗರ್, ರಾಮಚಂದ್ರ ಎಂಬುವವರಿಗೆ ಕ್ರಯ ಮಾಡಿದ್ದಾರೆಂದರು.

1987ರ ಕೈ ಬರಹದ ಪಹಣಿಯಲ್ಲಿ ಶಾಂತಮ್ಮ ಹಾಗೂ ಲಕ್ಷ್ಮಮ್ಮ ಹೆಸರಿನಲ್ಲೇ ಭೂಮಿ ಇದೆ. ಆದರೆ 2026ರ ಫೆಬ್ರವರಿಯಲ್ಲಿ ಪಹಣಿಯಲ್ಲಿ ಸಾಗರ್ ಹೆಸರು ನಮೂದಾಗಿದೆ. ಈ ರೀತಿಯ ಮೋಸ ಹೇಗೆ ನಡೆಯಿತು ಎಂಬುದೇ ಗೊತ್ತಾಗುತ್ತಿಲ್ಲ ಎಂದರು.

ಅನಕ್ಷರಸ್ಥ ಮಹಿಳೆಯರಿಗೆ ಮೋಸ ತಿಳಿದಿಲ್ಲ. ಈ ಬಗ್ಗೆ ನಾವು ಪ್ರಶ್ನೆ ಮಾಡಲು ಹೋದರೆ ಜಾತಿ ನಿಂದನೆ ಮಾಡಿ ಬಾಯಿಗೆ ಬಂದಂತೆ ಬಯ್ಯುತ್ತಾರೆ. ರೌಡಿಗಳನ್ನು ಕರೆತಂದು ಹೆದರಿಸುತ್ತಾರೆ. ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದರೂ ಈ ವರೆಗೆ ಪ್ರಕರಣ ದಾಖಲು ಮಾಡಿಲ್ಲ ಎಂದು ಆರೋಪಿಸಿದರು.

ಕೂಡಲೇ ಎಸ್ಪಿ ಮತ್ತು ಡಿಸಿ ಅವರು ಇತ್ತ ಗಮನ ಹರಿಸಿ, ದಲಿತರಿಗೆ ಆಗುತ್ತಿರುವ ದೌರ್ಜನ್ಯ ತಡೆದು ಭೂಮಿಯನ್ನು ಅವರಿಗೇ ಉಳಿಸಿಕೊಡಬೇಕು. ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಬಡ ಕುಟುಂಬಗಳಿಗೆ ನ್ಯಾಯ ಸಿಗುವವರೆಗೂ ಜಿಲ್ಲಾಧಿಕಾರಿ ಕಚೇರಿ ವರೆಗೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವ ಶಾಂತ, ಲಕ್ಷ್ಮಿದೇವಿ, ಲಕ್ಷ್ಮಮ್ಮ, ನಾಗರತ್ನ ಇದ್ದರು.

# ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಮುಖ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಸಮಸಮಾಜ ಆಯ್ಕೆಯ ಸಂಕೇತ. ಸಂವಿಧಾನ ಆಶಯದಡಿ ಪರಸ್ಪರ ಚರ್ಚಿಸಿ ಮನಸ್ತಾಪವಿಲ್ಲದಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡುವುದು ಧನಾತ್ಮಕ ಹಾಗೂ ಮಾದರಿಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜೆ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.



ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೌಕರರಿಗೆ ತಮ್ಮದೇಯಾದ ಸಂಘಟನೆ ಮುಖ್ಯ. ನೌಕರರ ಕಷ್ಟಕಾರ್ಪಣ್ಯಗಳಿಗೆ ಕಾನೂನು ಚೌಕಟ್ಟಿನಲ್ಲಿ, ಇಲಾಖಾ ಆದೇಶಗಳ ಅಡಿಯಲ್ಲಿ ನೆರವಾಗುವ ನಿಟ್ಟಿನಲ್ಲಿ ಸಂಘಟನೆ ಕಾರ್ಯನಿರ್ವಹಿಸಬೇಕು. ಪದಾಧಿಕಾರಿಗಳಿಗೆ ಸಂಯಮ ಮತ್ತು ಸಮತೋಲಿತ ಮನೋಭಾವ ಬಹಳ ಮುಖ್ಯ. ಹಲವು ಮನಸ್ಥಿತಿಯ ನೌಕರರನ್ನು ಒಗ್ಗೂಡಿಸಿಕೊಂಡು ಸಾಗಬೇಕಾಗುತ್ತದೆ. ಅನುಭವಿಗಳ ಜೊತೆ ಹೊಸ ಮುಖಗಳ ಯುವಪಡೆ ಆಯ್ಕೆಯಾಗಿರುವುದರಿಂದ ಶಿಕ್ಷಕರ ನಿರೀಕ್ಷೆಯಂತೆ ಕಾರ್ಯನಿರ್ವಹಿಸಬೇಕು ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ.ಎಂ. ವರದರಾಜು ಮಾತನಾಡಿ, ಶಿಕ್ಷಕರ ನಡುವೆ ಉದ್ವಿಘ್ನವಾಗುತ್ತಿದ್ದ ಗುಂಪುಗಾರಿಕೆಯ ಸಂದರ್ಭಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ರಾಜೇಂದ್ರ, ಎಂ.ಬಿ.ಅಮೃತೇಶ, ಬಿ.ಆರ್.ಧರ್ಮ, ಸಿ.ಎಸ್. ಅಣ್ಣಪ್ಪ, ಚಂದ್ರಮ್ಮ ಸೇರಿ ಹಲವು ಹಿರಿಯ ನಾಯಕರ ನೇತೃತ್ವದಲ್ಲಿ ಸಮಾನ ಮನಸ್ಸಿನಿಂದ ರೋಸ್ಟರ್ ವಾರು ಸಂವಿಧಾನ ಆಶಯದಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದೇವೆ. ಇಲಾಖೆ ಹಾಗೂ ಸಂಘಟನೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಇಲಾಖೆ ಸಂಘಕ್ಕೂ ಸ್ಪಂದಿಸಬೇಕು, ಸಂಘ ಇಲಾಖೆಯ ಶ್ರೇಯೋಭಿವೃದ್ಧಿಗೂ ಸ್ಪಂದಿಸುತ್ತದೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ನೂತನ ಅಧ್ಯಕ್ಷ ಎಂ.ಆರ್.ಶ್ರೀನಿವಾಸ್ ಅವರು ಮಾತನಾಡಿ, ಕಳೆದ ಬಾರಿ ತಾಲ್ಲೂಕು ಕಾರ್ಯದರ್ಶಿಯಾಗಿ ಅಧ್ಯಕ್ಷ ಎಂ.ಬಿ.ಅಮೃತೇಶ್ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಿದ್ದೇನೆ.

ನನ್ನ ಮೇಲೆ ಭರವಸೆಯಿಟ್ಟು ಈ ಬಾರಿ ಅವಿರೋಧ ಆಯ್ಕೆಗೆ ಸ್ಪಂದಿಸಿ ಪ್ರಥಮಾವಧಿಯಲ್ಲಿ ಅಧ್ಯಕ್ಷನನ್ನಾಗಿ ಮಾಡಿ ಮಹತ್ತರ ಜವಬ್ದಾರಿ ನೀಡಿರುವ ತಾಲ್ಲೂಕಿನ ಹಿರಿಯ ನಾಯಕರು ಹಾಗೂ ತಾಲ್ಲೂಕಿನ ಸಮಸ್ತ ಶಿಕ್ಷಕ ಬಂಧುಗಳಿಗೆ ಆಭಾರಿಯಾಗಿರುತ್ತೇನೆಂದರು.

ಕ್ಷೇತ್ರ ಸಮನ್ವಯಾಧಿಕಾರಿ ವಿಜಯಕುಮಾರ, ನೌಕರರ ಸಂಘದ ಗೌರವಾಧ್ಯಕ್ಷ ಬಿ.ಆರ್. ಧರ್ಮ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಗೌರವಾಧ್ಯಕ್ಷ ಚೆನ್ನಿಗರಾಮಯ್ಯ, ನೌಕರರ ಸಂಘದ ನಿರ್ದೇಶಕ ವೈ.ಆರ್.ರವಿ, ನಿಕಟಪೂರ್ವ ಅಧ್ಯಕ್ಷ ಎಂ.ಬಿ.ಅಮೃತೇಶ, ಮಾಜಿ ಕಾರ್ಯದರ್ಶಿ ಸಿ.ಎಸ್. ಅಣ್ಣಪ್ಪ, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷೆ ಚಂದ್ರಮ್ಮ, ಶಿಕ್ಷಕರಾದ ಹೆಚ್.ಪಿ.ಜಯಣ್ಣ, ಬಿ.ಎಸ್ .ಪರಮೇಶ್, ಎಸ್.ಚೈತ್ರ, ವೀಣಾ, ವಸಂತ, ಎಂ.ಬಿ.ಕುಮಾರ್, ಹೆಚ್ .ಡಿ.ಕುಮಾರ್, ಎಂ.ಬಿ.ಮಹೇಶ, ಮೋಹನಕುಮಾರ್, ಭೂಪಾಲಯ್ಯ, ಆರ್.ಶಿವರಾಂ ಮತ್ತಿತರರಿದ್ದರು.

ಅಧ್ಯಕ್ಷರಾಗಿ ಎಂ.ಆರ್. ಶ್ರೀನಿವಾಸ, ಉಪಾಧ್ಯಕ್ಷರಾಗಿ ಎಂ.ಆರ್. ವೇಣುಗೋಪಾಲ, ಮಹಿಳಾ ಉಪಾಧ್ಯಕ್ಷರಾಗಿ ವಿ.ರವಿತ, ಖಜಾಂಚಿಯಾಗಿ ಹೆಚ್.ಡಿ.ಸೋಮೇಶ್, ಕಾರ್ಯದರ್ಶಿಯಾಗಿ ಸಿ.ಎಸ್ .ಪ್ರವೀಣಕುಮಾರ್, ಸಹ ಕಾರ್ಯದರ್ಶಿಯಾಗಿ ಬೇಬಿ ಹಾಜಿರಾ ಆಯ್ಕೆಯಾಗಿದ್ದಾರೆ.

# ಮಲೆನಾಡಿನ ಶಾಲೆಗಳಿಗೆ ವಿಶೇಷ ಅನುದಾನ ಕೊಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆ ಮಲೆನಾಡು ಭಾಗದ ಸರ್ಕಾರಿ ಶಾಲೆಗಳ ಶಿಥಿಲಗೊಂಡ ಕಟ್ಟಡಗಳ ದುರಸ್ತಿ ಹಾಗೂ ಹೊಸ ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರ ತುರ್ತು ಅನುದಾನ ಬಿಡುಗಡೆ ಮಾಡಬೇಕೆಂದು ಶಾಸಕ ಸಿಮೆಂಟ್ ಮಂಜು ಒತ್ತಾಯಿಸಿದರು.



ತಾಲ್ಲೂಕಿನ ಹೆಬ್ಬನಹಳ್ಳಿ ಗ್ರಾಮದಲ್ಲಿ ಸೋಮವಾರ ನೂತನ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಶಾಲೆಗೆ ಹೊಸ ಕಟ್ಟಡ ನಿರ್ಮಿಸಬೇಕೆಂಬ ನಿರ್ಧಾರವನ್ನು ಕೈಗೊಂಡಿದ್ದು, 14.50 ಲಕ್ಷ ರೂ. ಅನುದಾನ ಮಂಜೂರಾಗಿದೆ ಎಂದರು.

ಇಲ್ಲಿನ ಹಳೆಯ ಶಾಲಾ ಕಟ್ಟಡ ಶಿಥಿಲಾವಸ್ಥೆಯಲ್ಲಿರುವುದರಿಂದ ಹೊಸ ಕಟ್ಟಡದ ಅವಶ್ಯಕತೆ ಹೆಚ್ಚಾಗಿದೆ. ವಿದ್ಯಾರ್ಥಿಗಳಿಗೆ ಸುರಕ್ಷಿತ ಹಾಗೂ ಗುಣಮಟ್ಟದ ಶಿಕ್ಷಣದ ವಾತಾವರಣ ಕಲ್ಪಿಸುವ ಉದ್ದೇಶದಿಂದ ಅಭಿವೃದ್ಧಿ ಕಾರ್ಯ ಆರಂಭಿಸಲಾಗಿದೆ ಎಂದರು.

ಪ್ರಸ್ತುತ ಶಾಲೆಗೆ 9 ಕೊಠಡಿಗಳ ಅಗತ್ಯವಿದ್ದು, ಹಂತ ಹಂತವಾಗಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೂ ಆದ್ಯತೆ ನೀಡಲಾಗುವುದು. ಮಲೆನಾಡು ಪ್ರದೇಶದಲ್ಲಿ ಅಧಿಕ ಮಳೆಯ ಕಾರಣ ಶಾಲಾ ಕಟ್ಟಡಗಳ ನಿರ್ವಹಣೆ ಮತ್ತು ಕಟ್ಟಡ ನಿರ್ಮಾಣಕ್ಕೆ ವಿಶೇಷ ಗಮನ ಹರಿಸಬೇಕಿದೆಯೆಂದರು. ಈ ಕುರಿತು ಸರ್ಕಾರದ ಮಟ್ಟದಲ್ಲಿಯೂ ಮನವಿ ಮಾಡಲಾಗಿದ್ದು, ಮಲೆನಾಡು ಭಾಗದ ಅನೇಕ ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಗೊಂಡಿರುವ ಹಿನ್ನೆಲೆಯಲ್ಲಿ ಅವುಗಳ ದುರಸ್ತಿ ಹಾಗೂ ಹೊಸ ಕಟ್ಟಡ ನಿರ್ಮಾಣಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು ಒತ್ತಾಯಿಸಿದರು.

ಮಕ್ಕಳು ಯಾವುದೇ ಭಯವಿಲ್ಲದೆ ಸುರಕ್ಷಿತ ವಾತಾವರಣದಲ್ಲಿ ಶಿಕ್ಷಣ ಪಡೆಯಲು ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಬೇಕು. ಮುಂದಿನ ದಿನಗಳಲ್ಲಿ ಕ್ಷೇತ್ರದ ಇನ್ನಷ್ಟು ಶಾಲೆಗಳಿಗೆ ಅನುದಾನ ತಂದು ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲಾಗುವುದೆಂದು ಸಿಮೆಂಟ್ ಮಂಜು ತಿಳಿಸಿದರು.

ಇದೆ ವೇಳೆ ಶಾಲೆಯ ಆವರಣದೊಳಗೆ ನೂತನವಾಗಿ ನಿರ್ಮಾಣಗೊಂಡ ಶೌಚಾಲಯವನ್ನು ಉದ್ಘಾಟಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ, ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ಜೈಪ್ರಕಾಶ್, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಧರ್ಮಪ್ಪ, ದೈಹಿಕ ಶಿಕ್ಷಣ ಪರೀಕ್ಷಕ ಯಶವಂತ್, ಬಿಜೆಪಿ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಪ್ರಕಾಶ್ ಶೆಟ್ಟಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಉಮಾ ಜಗದೀಶ್, ಮುಖಂಡರಾದ ಬಸವರಾಜ್, ಪುನೀತ್ ಇತರರಿದ್ದರು.

## ಶಾಲಾ ದಾಖಲೆ ಪತ್ರ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಶಾಲಾ ಕಟ್ಟಡದ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಪ್ರಮುಖ ದಾಖಲೆ ಪತ್ರಗಳನ್ನು ಕಳವು ಮಾಡಿರುವ ಘಟನೆ ನಗರದ ಶ್ರೀನಿವಾಸ ನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ.

ದಾಖಲಾತಿ ಕೊರತೆಯಿಂದ ಈ ಶಾಲೆಯನ್ನು ಮುಚ್ಚಲಾಗಿದೆ. ಮಕ್ಕಳ ದಾಖಲಾತಿ ಹಾಗೂ ಇತರ ಪತ್ರಗಳು ಶಾಲೆಯಲ್ಲೇ ಇದ್ದವು. ಜೂನ್ 4 ರಿಂದ 6ರ ಮಧ್ಯದಲ್ಲಿ ಕಳ್ಳತನ ನಡೆದಿದೆ. ಬಲವಾದ ಆಯುಧದಿಂದ ಮುಂಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಮತ್ತೊಂದು ಕೊಠಡಿಯ ಮರದ ಬಾಗಿಲು ಮುರಿದು ನೋಂದಣಿ ಪತ್ರಗಳು, ಕ್ಯಾಶ್ ಬುಕ್, ಅಕ್ಷರ ದಾಸೋಹದ ದಾಖಲೆ, ಹಾಜರಾತಿ ಪುಸ್ತಕ, ಗ್ರಂಥಾಲಯ ಪುಸ್ತಕಗಳನ್ನು ಕದ್ದಿದ್ದಾರೆ.

ಕಳುವಾಗಿರುವ ಒಟ್ಟು ವಸ್ತುಗಳ ಮೊತ್ತ 5 ಸಾವಿರ ರೂ. ಆಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪ್ರವಾಸಿಗರ ಸೆಳೆಯಲು ಕೈಗೊಳ್ಳಬೇಕಿದೆ ಕ್ರಮ

## ಮಳೆಗಾಲದಲ್ಲಿ ಪಶ್ಚಿಮಘಟ್ಟ ವೀಕ್ಷಣೆಯ ಕೌತುಕ | ನಿಷೇಧದಿಂದ ಸಾರ್ವಜನಿಕರಿಗೆ ಅನಾನುಕೂಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಪ್ರವಾಸೋದ್ಯಮ ಉತ್ತೇಜನಕ್ಕೆ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ಕೇವಲ ಕಾಗದದಲ್ಲೇ ಉಳಿದಿರುವ ಪರಿಣಾಮ ಪ್ರವಾಸಿಗರು ಹಾಗೂ ಸ್ಥಳೀಯರು ತೀವ್ರ ನಿರಾಸೆ ಅನುಭವಿಸುವಂತಾಗಿದೆ.

ಮಳೆಗಾಲ ಆರಂಭವಾಗಿರುವ ಹಿನ್ನಲೆಯಲ್ಲಿ ಸಕಲೇಶಪುರ ತಾಲ್ಲೂಕಿನ ಪಶ್ಚಿಮ ಘಟ್ಟಗಳ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಆದರೆ ಚಾರಣಕ್ಕೆ ಬರುವವರಿಗೆ ಎಲ್ಲಿಯೂ ಮುಕ್ತ ಅವಕಾಶ ಕಲ್ಪಿಸಿಲ್ಲ. ಪಟ್ಲ ಬೆಟ್ಟ, ಗವಿ ಬೆಟ್ಟ, ಹೊಸಳ್ಳಿ ಬೆಟ್ಟ, ಮೂರ್ಕಣ್ಣುಗುಡ್ಡ ಸೇರಿ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ನಿಷೇಧ ಹೇರಲಾಗಿದೆ. ಚಾರಣ ಸ್ಥಳಗಳಲ್ಲಿ ಆನ್‌ಲೈನ್ ಟಿಕೆಟ್ ವ್ಯವಸ್ಥೆ, ಅರಣ್ಯ ಹಾಗೂ ಕಂದಾಯ ಇಲಾಖೆಯಿಂದಲೇ ವಾಹನ ವ್ಯವಸ್ಥೆ ಮಾಡುವ ಭರವಸೆಯನ್ನು ಜಿಲ್ಲಾಡಳಿತ ನೀಡಿತ್ತು. ಈ ಸಂಬಂಧ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಸಭೆಗಳನ್ನು ನಡೆಸಿದ್ದರು. ಆದರೆ ಯಾವುದು ಕಾರ್ಯರೂಪಕ್ಕೆ ಬಾರದಿರುವ ಹಿನ್ನಲೆಯಲ್ಲಿ ಪ್ರವಾಸಿಗರ ಸಂಖ್ಯೆ ಗಣನೀಯ ಇಳಿಕೆಯಾಗಿದೆ. ನಾಲ್ಕೈದು ಕಿ.ಮೀ. ಕಾಲ್ನಡಿಗೆಯಲ್ಲಿ ಹೋಗಲು ಆಗದ ಪ್ರವಾಸಿಗರು ಸುಂದರ ತಾಣಗಳನ್ನು ನೋಡುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಇದು ಸ್ಥಳೀಯ ಪ್ರವಾಸೋದ್ಯಮ ಬೆಳವಣಿಗೆ ಮೇಲೆ ಭಾರೀ ಪರಿಣಾಮ ಬೀರಿದೆ. ರಾಷ್ಟ್ರೀಯ ಹೆದ್ದಾರಿ 75ರ ಕಾಮಗಾರಿ ಹಿನ್ನೆಲೆಯಲ್ಲಿ ಮಂಜ್ರಾಬಾದ್ ಕೋಟೆ



ವೀಕ್ಷಣೆಗೂ ಜನರ ಸಂಖ್ಯೆ ಕಡಿಮೆಯಾಗಿದೆ.

### ಪಟ್ಲ ಬೆಟ್ಟದಲ್ಲಿ ಪ್ರವಾಸಿಗರ ಸಂಖ್ಯೆ ಕುಸಿತ

ಸೌಂದರ್ಯದ ಕಣಜ ಎಂದೇ ಖ್ಯಾತಿ ಪಡೆದಿರುವ ಪಟ್ಲ ಬೆಟ್ಟಕ್ಕೆ ಪ್ರತಿವರ್ಷ ಇಷ್ಟೊತ್ತಿಗೆ ಪ್ರವಾಸಿಗರು ವಿಪರೀತ ಸಂಖ್ಯೆಯಲ್ಲಿ ಬರುತ್ತಿದ್ದರು. ಚಲಿಸುವ ಮೋಡಗಳು, ಆಹ್ಲಾದಕರ ಗಾಳಿ, ದೂರದಿಂದ ನುಣ್ಣಗೆ ಕಾಣಿಸುವ ಜಲಪಾತ, ಹಸಿರು ಪ್ರದೇಶ ನೋಡುವುದೇ ಕಣ್ಣಿಗೆ ಹಬ್ಬ. ಮಳೆಗಾಲಕ್ಕೆ ತಮಿಳುನಾಡಿನ ಊಟಿ ಅನುಭವ ನೀಡುವ ಪಟ್ಲ ಬೆಟ್ಟ ಪ್ರವಾಸಿಗರ ಅಚ್ಚುಮೆಚ್ಚಿನ ತಾಣ. ಹಾಸನ ಮಾತ್ರವಲ್ಲದೆ ಬೆಂಗಳೂರು, ಮಂಗಳೂರು ಸೇರಿ ವಿವಿಧ ಜಿಲ್ಲೆಯಿಂದ ಸಾರ್ವಜನಿಕರು ಅಲ್ಲಿಗೆ ಬರುತ್ತಿದ್ದರು. ಆದರೆ ಕಳೆದ ಕೆಲವು ವರ್ಷಗಳಿಂದ ಅಲ್ಲಿ ವಾಹನ ಓಡಾಟ ನಿಷೇಧಿಸಲಾಗಿದೆ. ಬೈಕ್‌ಗಳು ತೆರಳದಂತೆ ಗೇಟ್ ಹಾಕಿ ಸುತ್ತಲೂ ತಂತಿ ಬೇಲಿ ಹಾಕಿರುವುದರಿಂದ ಹೋಗುವುದು ಅಸಾಧ್ಯವಾಗಿದೆ. ಜೊತೆಗೆ ಸೂಕ್ತ ರಕ್ಷಣೆಯೂ ಇಲ್ಲದಿರುವುದರಿಂದ ಪ್ರವಾಸಿಗರು ಪಟ್ಲ ಬೆಟ್ಟದತ್ತ ಬರುತ್ತಿಲ್ಲ. ಪ್ರವಾಸಿಗರನ್ನೇ ನಂಬಿಕೊಂಡಿದ್ದ ಸ್ಥಳೀಯ ವ್ಯಾಪಾರಿಗಳು ಸಹ ಈ ಬಾರಿ ನಷ್ಟ ಅನುಭವಿಸುವಂತಾಗಿದೆ.

### ಜಿಲ್ಲಾಡಳಿತ ನಿರ್ಲಕ್ಷ್ಯಕ್ಕೆ ಸ್ಥಳೀಯರು ಹೈರಾಣ

ಪಶ್ಚಿಮಘಟ್ಟದ ಸಾಲು ಹೊತ್ತಿರುವ ಸಕಲೇಶಪುರ ಪ್ರವಾಸೋದ್ಯಮಕ್ಕೆ ಹೆಸರಾದ ಊರು. ಕಾಡಾನೆ ಹಾವಳಿ ಹಾಗೂ ನಿರಂತರ ಮಳೆಯಿಂದ ಜನರ ಆದಾಯವು ಅಷ್ಟಕ್ಕಷ್ಟೇ ಎಂಬಂತಾಗಿದೆ. ಇನ್ನು ಪ್ರವಾಸಿ ತಾಣಗಳ ಸುತ್ತಲಿನ ಜನರು ವ್ಯಾಪಾರ ವಹಿವಾಟು ನಂಬಿ ಬದುಕುತ್ತಿದ್ದಾರೆ. ಆದರೆ ಪ್ರೇಕ್ಷಣೀಯ ಸ್ಥಳಗಳಲ್ಲಿ ಜಿಲ್ಲಾಡಳಿತ ನಿಷೇಧ ಹೇರಿರುವುದರಿಂದ ಭಾರೀ ಸಮಸ್ಯೆಯಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

### ಬೆಟ್ಟದ ಭೈರವೇಶ್ವರದಲ್ಲೂ ಅದೇ ಸ್ಥಿತಿ

ಐತಿಹಾಸಿಕ ಬೆಟ್ಟದ ಭೈರವೇಶ್ವರ ದೇವಸ್ಥಾನ ಮಳೆಗಾಲದಲ್ಲಿ ಜನರಿಂದ ತುಂಬಿ ತುಳುಕುತ್ತಿದ್ದ ಪ್ರದೇಶ. ಆದರೆ ಕೆಲ ತಿಂಗಳ ಹಿಂದೆ ಛಾಯಾಗ್ರಾಹಕರು ಹಾಗೂ ಸ್ಥಳೀಯರ ನಡುವೆ ಗಲಾಟೆ ನಡೆದ ಬಳಿಕ ಅಲ್ಲಿಗೆ ಜನರ ಬರುವಿಕೆ ತೀರಾ ಕಡಿಮೆಯಾಗಿದೆ. ಫೋಟೋ ಕ್ಲಿಕ್ಕಿಸಿಕೊಂಡರೆ ಜಗಳ ಮಾಡುತ್ತಾರೆಂಬ ಭಯ ಜನರಲ್ಲಿ ಮೂಡಿದೆ. ಜೊತೆಗೆ ಫೋಟೋ ಶೂಟ್‌ಗೆ ಜಿಲ್ಲಾಡಳಿತ ಶುಲ್ಕ ನಿಗದಿಪಡಿಸಿರುವುದು ಆತಂಕಕ್ಕೆ ಕಾರಣವಾಗಿದೆ.

## ಮುದುಡಿ ಗ್ರಾಮದಲ್ಲಿ ಶ್ರೀನಿವಾಸ ಕಲ್ಯಾಣ ಮಹೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಗಂಡಸಿ ಹೋಬಳಿ ಮುದುಡಿ ಗ್ರಾಮದಲ್ಲಿ ಶ್ರೀನಿವಾಸ ಕಲ್ಯಾಣ ಮಹೋತ್ಸವ ಅರ್ಥಪೂರ್ಣವಾಗಿ ನೆರವೇರಿತು.

ಶ್ರೀ ವೀರಾಂಜನೇಯ ಸ್ವಾಮಿ ಟ್ರಸ್ಟ್, ಬೆಂಗಳೂರಿನ ಶ್ರೀವಾರಿ ಫೌಂಡೇಶನ್ ಮತ್ತು ಮೈಸೂರಿನ ಕಲ್ಪವೃಕ್ಷ ಟ್ರಸ್ಟ್ ಹಾಗೂ ಗ್ರಾಮಸ್ಥರ ಸಹಕಾರದಲ್ಲಿ ಕಾರ್ಯಕ್ರಮ ನೆರವೇರಿತು. ಶನಿವಾರ ರಾತ್ರಿ 7 ಗಂಟೆಗೆ ಗ್ರಾಮ ದೇವತೆ ಶ್ರೀ ಕೋಟೆ ಮಾರಮ್ಮ ದೇವಿ ಅವರನ್ನು ಶ್ರೀನಿವಾಸ ಕಲ್ಯಾಣ ಮಹೋತ್ಸವ ಮಂಟಪದ ಬಳಿಗೆ ಆಹ್ವಾನಿಸಿ ವೀರಾಂಜನೇಯ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಗುಂಡೂರಾವ್ ಅವರಿಂದ ಧ್ವಜಾರೋಹಣದ ನಂತರ ಭಜನೆ, ದೇವರನಾಮ, ಭಕ್ತಿಗೀತೆ, ಕೀರ್ತನೆ, ಗೋವಿಂದನ ಸಹಸ್ರನಾಮಾವಳಿಯ ಬಿರುದಾವಳಿಯೊಂದಿಗೆ ಆಗಮಿಕ ಅರ್ಚಕರು ಮತ್ತು ಪುರೋಹಿತರ ತಂಡದಿಂದ ಶ್ರದ್ಧಾ ಭಕ್ತಿಯಿಂದ ಮಹೋತ್ಸವ ನಡೆಸಲಾಯಿತು.

ಶ್ರೀವಾರಿ ಫೌಂಡೇಶನ್‌ನ ವೆಂಕಟೇಶಮೂರ್ತಿ ಮಾತನಾಡಿ, ಶ್ರೀನಿವಾಸ ಸ್ವಾಮಿ ಕೈಲಾಸದಿಂದ ನೇರವಾಗಿ ಭೂಲೋಕದ ಮುದುಡಿ ಗ್ರಾಮಕ್ಕೆ ಆಗಮಿಸಿದ್ದ ಎಂಬುದಕ್ಕೆ ಪ್ರತೀತಿ ಇದೆ. ತಿರುಪತಿಗೆ ಹೋಗಿ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡಲು ಸಾಧ್ಯವಾಗದವರಿಗೆ ಅನುಕೂಲವಾಗಲಿ ಎಂದು ಶ್ರೀನಿವಾಸ ಇಲ್ಲಿಯೇ ನೆಲೆಸಿದ್ದಾನೆ. ಭಕ್ತರ ಇಷ್ಟಾರ್ಥಗಳನ್ನು ದೇವರು ಈಡೇರಿಸುತ್ತಾನೆ ಎಂದರು.

ಶ್ರೀ ವೀರಾಂಜನೇಯ ಸ್ವಾಮಿ ಟ್ರಸ್ಟ್ ವತಿಯಿಂದ ಮೈಸೂರು-ಶಿವಮೊಗ್ಗ ರಸ್ತೆಯ ಮುದುಡಿ ಗ್ರಾಮದ ಬಳಿ ಶ್ರೀ ರಾಘವೇಂದ್ರ ಸ್ವಾಮಿ ಮಠ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಾಲಯ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿದ್ದು 3 ಕೋಟಿ ರೂ. ವೆಚ್ಚದಲ್ಲಿ ಭವ್ಯ ದೇಗುಲ ತಲೆ ಎತ್ತಲಿದೆ ಎಂದರು.

ಕಲ್ಪವೃಕ್ಷ ಟ್ರಸ್ಟ್ ಅಧ್ಯಕ್ಷ ನಾಗೇಂದ್ರ, ಕಾರ್ಯದರ್ಶಿ ಗುರುಪ್ರಸಾದ್ ಮತ್ತಿತರರಿದ್ದರು.

## ಬದುಕಿಗೆ ದಾರಿ ತೋರುವ ಶಾಲೆಯ ಮೇಲೆ ಪ್ರೀತಿ ಇರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಕ್ಷರ ಕಲಿಸುವುದು ಮಾತ್ರವಲ್ಲದೆ ಬದುಕಿಗೆ ದಾರಿ ತೋರಿಸುವ ಶಾಲೆಯ ಬಗ್ಗೆ ಪ್ರತಿಯೊಬ್ಬರು ಪ್ರೀತಿ ಹೊಂದಿರಬೇಕು ಹಾಗೂ ಅದರ ಉಳಿವಿಗೆ ಶ್ರಮಿಸಬೇಕೆಂದು ನಿವೃತ್ತ ಶಿಕ್ಷಣಾಧಿಕಾರಿ ಜೆ.ಬಿ.ತಮ್ಮಣ್ಣಗೌಡ ಹೇಳಿದರು.

ತಾಲ್ಲೂಕಿನ ಜಿನ್ನೇನಹಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಾಲೆಗಳನ್ನು ಕಟ್ಟುವ, ಬೆಳೆಸುವ ಮತ್ತು ಉಳಿಸುವ ಜವಾಬ್ದಾರಿ ಗ್ರಾಮಸ್ಥರದ್ದಾಗಿದೆ. ಶಾಲೆ ಬೆಲೆ ಕಟ್ಟಲಾಗದ ಆಸ್ತಿ. ಎಂದೆಂದಿಗೂ ನಾಶವಾಗದ ಅಕ್ಷರ ಸಂಪತ್ತನ್ನು ಶಾಲೆಗಳು ನೀಡುತ್ತದೆಂಬ ಅರಿವು ಎಲ್ಲರಿಗೂ ಇರಬೇಕು. ಪ್ರತಿ ವರ್ಷ ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಮ್ಮೂರ ಶಾಲೆ ಎಂಬ ಪರಿಕಲ್ಪನೆಯಡಿ ನಗದು ಬಹುಮಾನ ನೀಡುವ ಮೂಲಕ ವಿದ್ಯಾರ್ಥಿಗಳನ್ನು



ಸನ್ಮಾನಿಸಲಾಗುತ್ತದೆ. ಈ ವರ್ಷವೂ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗಿದೆ ಎಂದರು.

ಶಿಕ್ಷಣ ಎನ್ನುವುದು ಸರ್ಕಾರಿ ಶಾಲೆಗಳಲ್ಲಿ ಎಷ್ಟೊಂದು ಸುಲಭವಾಗಿ, ಸಹಜವಾಗಿ ಮತ್ತು ಉಚಿತವಾಗಿ ಸಿಗುತ್ತದೆಂದರೆ ಪ್ರಕೃತಿಯಲ್ಲಿ ಗಾಳಿ, ಬೆಳಕು, ನೀರು ಹೇಗೆ ಉಚಿತವಾಗಿ ಸಿಗುತ್ತದೆಯೋ ಅದೇ ರೀತಿ ಶಿಕ್ಷಣವು ಉಚಿತ ಮತ್ತು ಸುಲಭವಾಗಿ ಸಿಗುತ್ತಿದೆ. ಈ ಅವಕಾಶಗಳನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಉಚಿತ ಸೌಲಭ್ಯ ಇರುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅದರ ಸದುಪಯೋಗ ಪಡೆಯಬೇಕು. ಒಂದು ರಾಷ್ಟ್ರದ ಪ್ರಗತಿ ಶಿಕ್ಷಣ ರಂಗದ ಪ್ರಗತಿಯನ್ನು ಅವಲಂಬಿಸಿದೆ. ಶಿಕ್ಷಣ ರಂಗದ ಪ್ರಗತಿ ಆಗಬೇಕೆಂದರೆ ವಿದ್ಯಾರ್ಥಿಗಳು ಸರಸ್ವತಿ ಇರುವೆಡೆಗೆ ಹುಡುಕಿಕೊಂಡು ಹೋಗಬೇಕು. ಅದು ಸಾಧ್ಯವಿಲ್ಲದಾಗ ಸರಸ್ವತಿಯೇ ವಿದ್ಯಾರ್ಥಿಗಳನ್ನು ಹುಡಿಕಿಕೊಂಡು ಬರಬೇಕು.

ಪ್ರಾಯಶಃ ಇತ್ತೀಚಿನ ದಿನಗಳಲ್ಲಿ ಎಲ್ಲಾ ಸರ್ಕಾರಗಳ ಪ್ರಯತ್ನದಿಂದಾಗಿ ಶಿಕ್ಷಣ ರಂಗದಲ್ಲಿ ಆಗಿರುವ ಕ್ರಾಂತಿಯನ್ನು ನೋಡಿದರೆ ಪ್ರತೀ ಗ್ರಾಮದಲ್ಲಿ ಒಂದು ಸರ್ಕಾರಿ ಶಾಲೆ ಇರುವುದನ್ನು ಕಾಣಬಹುದಾಗಿದೆ. ಹಾಗಾಗಿ ಸರಸ್ವತಿಯೇ ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಬಂದ ಹಾಗೆ ಆಗಿದೆ. ಈ ಅವಕಾಶವನ್ನು ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬೇಕು. ವಿದ್ಯಾರ್ಥಿಗಳು ದೊಡ್ಡ ಗುರಿ ಹೊಂದಿ ಸಾಧನೆ ಮಾಡಬೇಕೆಂದು ಸಲಹೆ ನೀಡಿದರು.

ಕ್ಷೇತ್ರ ಸಮನ್ವಯಾಧಿಕಾರಿ ಅನಿಲ್, ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಮಂಜುನಾಥ್, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಆನಂದ್, ಶಿಕ್ಷಣ ಸಂಯೋಜಕ ಜೆ.ಇ.ಲೋಕೇಶ್, ಶ್ರೀನಿವಾಸ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜಣ್ಣ ಮಾತನಾಡಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಜೆ.ಬಿ.ರುಕ್ಮಿಣಿ, ಮುಖ್ಯ ಶಿಕ್ಷಕ ಓಂಕಾರಮೂರ್ತಿ, ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

## ಕುಗ್ರಾಮಗಳಿಗೂ ರಸ್ತೆ ಕಲ್ಪಿಸಿದ ಹೆಮ್ಮೆ ಇದೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ರಸ್ತೆ ಸಂಪರ್ಕ ಅಸಾಧ್ಯ ಎನ್ನುವಂತಹ ಗ್ರಾಮಗಳನ್ನು ಆದ್ಯತೆಯಾಗಿ ಪರಿಗಣಿಸಿ ಕಾಮಗಾರಿ ಕೈಗೊಳ್ಳುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಒಳಿತು ಮಾಡುವ ಮನಸ್ಸಿರುವವರಿಗೆ ಯಾವುದೂ ಅಸಾಧ್ಯವಲ್ಲ ಎಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ತಾಲ್ಲೂಕಿನ ಮದಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮದಘಟ್ಟ-ಯಡೇಹಳ್ಳಿ, ಪಡುವಳಲು ಗ್ರಾಮಗಳಲ್ಲಿ ಎತ್ತಿನಹೊಳೆ ನೀರಾವರಿ ಯೋಜನೆಯಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮದಘಟ್ಟ ಗ್ರಾಮ ಪಂಚಾಯಿತಿಯ ಮೂರು ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಸಚಿವರೊಂದಿಗೆ ಚರ್ಚಿಸಿ 63 ಲಕ್ಷ ರೂ. ಅನುದಾನ ಮಂಜೂರು ಮಾಡಿಸಿ ರಾಜ್ಯ ಹೆದ್ದಾರಿ ಕಾಮೇನಹಳ್ಳಿಯಿಂದ ತಾರಿಮರದ ವರೆಗಿನ ಸಂಪರ್ಕದ 6 ಕಿ.ಮೀ. ರಸ್ತೆಯನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಲೋಕೋಪಯೋಗಿ ಇಲಾಖೆಗೆ



ಸೇರಿದ ಬಾಕಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಬುದ್ಧ ವಿಹಾರ ಸಮೀಪದ ರಸ್ತೆ ಕಾಮಗಾರಿಗೂ ಚಾಲನೆ ನೀಡಿದ್ದು, ಆದ್ಯತೆ ಮೇರೆಗೆ ಕೆಲಸ ನಡೆಯುತ್ತಿದೆ ಎಂದರು.

ಚುನಾವಣೆಗೂ ಮೊದಲು ಸಾರ್ವಜನಿಕರಿಗೆ ನಾನು ಭರವಸೆ ಕೊಟ್ಟಂತೆ ಕೆಲಸ ಮಾಡುತ್ತಿದ್ದೇನೆ. ರಸ್ತೆ ಮಾಡಲು ಸಾಧ್ಯವೇ ಇಲ್ಲ ಎನ್ನುವಂತಹ ಸ್ಥಿತಿಯಲ್ಲಿದ್ದ ಗ್ರಾಮಗಳನ್ನು ಗುರುತಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ವಿಶ್ವಗುರು ಬಸವಣ್ಣನವರ ಕಾಯಕವೇ ಕೈಲಾಸ ತತ್ವದಂತೆ ಕೆಲಸ ಮಾಡುತ್ತಿದ್ದೇನೆ ಎಂದರು.

ಕ್ಷೇತ್ರದ ಯಾವುದೇ ಗ್ರಾಮಕ್ಕೆ ಭೇಟಿ ನೀಡಿದರೂ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿರುತ್ತಾರೆ. ತಾಯಿ, ತಂಗಿ ಮತ್ತು ಅಕ್ಕನ ಸ್ಥಾನದಲ್ಲಿ ನಿಂತು ಎಲ್ಲರೂ ಆಶೀರ್ವಾದ ಮಾಡುತ್ತಿದ್ದಾರೆ. ಅವರ ಆಶೀರ್ವಾದವೇ ಈ ಅಭಿವೃದ್ಧಿ ಕಾರ್ಯಗಳಿಗೆ ಪ್ರೇರಣೆಯಾಗಿದೆ ಎಂದರು.

ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ್ ಬಹುಜನ್ ಮಾತನಾಡಿ, ಚುನಾವಣೆ ಮುಗಿದ ನಂತರ ಶಾಸಕರಾದವರು ಪಕ್ಷ, ಭೇದವಿಲ್ಲದೆ ಕ್ಷೇತ್ರದಲ್ಲಿ ಶಾಸಕರಾಗಿರುತ್ತಾರೆ. ಶಾಸಕ ಹೆಚ್.ಕೆ.ಸುರೇಶ್ ಅವರು ಚುನಾವಣೆಗೂ ಮೊದಲು ಪಡುವಳಲು-ಯಡೇಹಳ್ಳಿ ಗ್ರಾಮಗಳ ನಿವಾಸಿಗಳಿಗೆ ಮತ್ತು ಇಲ್ಲಿನ ಶಾಲೆಗೆ ನೀಡಿದ್ದ ಆಶ್ವಾಸನೆ ಈಡೇರಿಸುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಕ್ಷೇತ್ರದ ಎಲ್ಲಾ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಿ ಎಂದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹರೀಶ್, ಗ್ರಾಮಸ್ಥರಾದ ಶಿವಯ್ಯ, ಚಂದನ್, ಉಮೇಶ್, ಚಂದ್ರಣ್ಣ, ದರ್ಶನ್, ಬಸವರಾಜು, ತೀರ್ಥಪ್ರಸಾದ್, ಕಿರಣ್, ಭಾರತಿ, ಲಾಸ್ಯ ಇತರರಿದ್ದರು.



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ 3 ಲಕ್ಷ ರೂ. ಮೌಲ್ಯದ ಬೀಟೆ ಮರವನ್ನು ವಲಯ ಅರಣ್ಯ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

ಕೆ.ಹೊಸಕೋಟೆ ಶಾಖೆಯ ಮಗ್ಗೆ ಗ್ರಾಮದ ಬಳಿ ಬೀಟೆ ಮತ್ತು ಹಾಡಗ ನಾಟಗಳನ್ನು ಅಕ್ರಮವಾಗಿ ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದ ಪಿಕಪ್ ವಾಹನವನ್ನು ಸುಪರ್ದಿಗೆ ಪಡೆಯಲಾಗಿದೆ. ವಾಹನ ಚಾಲಕನನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ.

## ಇತಿಹಾಸದಲ್ಲಿ ಈ ದಿನ

### ಜೂನ್-09

1815: ನೆಪೋಲಿಯನ್ ಯುದ್ಧಗಳ ನಂತರ ಯುರೋಪಿನ ರಾಜಕೀಯ ಪುನರ್‌ವ್ಯವಸ್ಥೆಗೆ ಕಾರಣವಾದ ವಿಯೆನ್ನಾ ಒಪ್ಪಂದದ ಅಂತಿಮ ಕರಡು ಸಹಿ ಮಾಡಲಾಯಿತು.

1934: ವಿಶ್ವಪ್ರಸಿದ್ಧ ಕಾರ್ಟೂನ್ ಪಾತ್ರ ಡೊನಾಲ್ಡ್ ಡಕ್ ಮೊದಲ ಬಾರಿಗೆ The Wise Little Hen ಚಿತ್ರದಲ್ಲಿ ಕಾಣಿಸಿಕೊಂಡನು.

1946: ಥೈಲ್ಯಾಂಡ್‌ನ ರಾಜ ಭೂಮಿಬೋಲ್ ಅಡುಲ್ಯದೇಜ್ ಪಟ್ಟಾಭಿಷೇಕಗೊಂಡರು. ಅವರು ವಿಶ್ವದ ಅತ್ಯಂತ ದೀರ್ಘಾವಧಿ ಆಳಿದ ರಾಜರಲ್ಲಿ ಒಬ್ಬರಾಗಿದ್ದರು.

1967: ಆರು ದಿನಗಳ ಯುದ್ಧದ ವೇಳೆ ಇಸ್ರೇಲ್, ಸಿರಿಯಾದಿಂದ ಗೋಲಾನ್ ಹೈಟ್ಸ್ ಪ್ರದೇಶವನ್ನು ವಶಪಡಿಸಿಕೊಂಡಿತು.

1973: ಪ್ರಸಿದ್ಧ ಕುದುರೆ ಸೆಕ್ರೆಟೇರಿಯಟ್ ಟ್ರಿಪಲ್ ಕ್ರೌನ್ ಗೆದ್ದು ಕುದುರೆ ಓಟದ ಇತಿಹಾಸದಲ್ಲಿ ಹೊಸ ದಾಖಲೆ ನಿರ್ಮಿಸಿತು.

1900: ಭಾರತೀಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಆದಿವಾಸಿ ನಾಯಕ ಬಿರ್ಸಾ ಮುಂಡಾ ಬ್ರಿಟಿಷರ ಕಾರಾಗೃಹದಲ್ಲಿ ನಿಧನರಾದರು.

#### ಜನನ

1672: ರಷ್ಯಾದ ಚಕ್ರವರ್ತಿ ಪೀಟರ್ ದಿ ಗ್ರೇಟ್

1781: ರೈಲು ಎಂಜಿನ್ ಅಭಿವೃದ್ಧಿಗೆ ಹೆಸರಾದ ಇಂಗ್ಲಿಷ್ ಇಂಜಿನಿಯರ್ ಜಾರ್ಜ್ ಸ್ಟೀಫನ್ಸನ್

## ರಂಗಭೂಮಿ ಕಲೆ ಉಳಿಸುವ ಅವಶ್ಯಕತೆ ಹೆಚ್ಚಿದೆ : ನಾಗರಾಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ರಂಗಕಲೆ ಉಳಿಸುವಲ್ಲಿ ಸಂಘ ಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ ಎಂದು ನಿವೃತ್ತ ಪಿಎಸ್‌ಐ ನಿಡಗೆರೆ ನಾಗರಾಜು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಗರೀಘಟ್ಟ ಗ್ರಾಮದಲ್ಲಿ ಇತ್ತೀಚೆಗೆ ಶ್ರೀ ಬಸವೇಶ್ವರ ಕಲಾ ಮತ್ತು ಸಾಂಸ್ಕೃತಿಕ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಕಲೆ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಇತ್ತೀಚೆಗೆ ಕಡಿಮೆಯಾಗಿದ್ದು, ಗ್ರಾಮೀಣ ಭಾಗದಲ್ಲಿ ಹಿಂದೆ ನಡೆಯುತ್ತಿದ್ದ ಜನಪದ, ನಾಟಕ, ಕೋಲಾಟದಂತಹ ಕಾರ್ಯಕ್ರಮಗಳು ಕ್ರಮೇಣ ನಶಿಸುತ್ತಿವೆ. ರಂಗಭೂಮಿ ಕಲೆಯೂ ಕೂಡ ಮರೆಯಾಗುತ್ತಿದೆ. ಇಂತಹ ಸಮಯದಲ್ಲಿ ಗ್ರಾಮದ ಯುವಕರು ಕಲೆಯನ್ನು ಪೋಷಿಸಿ ಉಳಿಸುವ ಸಲುವಾಗಿ ಕಲಾ ಸಂಘ ಸ್ಥಾಪಿಸಿ ನೋಂದಣಿ ಮಾಡಿಸಿರುವುದು ಉತ್ತಮ ಕೆಲಸವೆಂದರು ಪಾಲ್ಗೊಳ್ಳಬೇಕು ಎಂದರು. ರಂಗ ನಿರ್ದೇಶಕ ಜಿ.ಜಿ.ಕೇಶವ ಮಾತನಾಡಿ, ಗ್ರಾಮದ ಯುವಕರು ಪೌರಾಣಿಕ ನಾಟಕ ಮಾಡುವ ಸಲುವಾಗಿ 18 ಜನರನ್ನೊಳಗೊಂಡ ಸಂಘವನ್ನು ಸ್ಥಾಪಿಸಿದ್ದಾರೆ. ಗ್ರಾಮಸ್ಥರು ಸಹಕಾರ ನೀಡಿದರೆ ಸರ್ಕಾರದ ವಿವಿಧ ಯೋಜನೆಗಳಲ್ಲಿ ಅನುದಾನ ಪಡೆದುಕೊಳ್ಳಬಹುದು. ವಿವಿಧ ಅಭಿವೃದ್ಧಿ ಕಾರ್ಯಕ್ರಮ, ಆರೋಗ್ಯತಪಾಸಣೆ ಶಿಬಿರ, ಅರಿವು ಕಾರ್ಯಕ್ರಮ, ರಕ್ತದಾನ ಶಿಬಿರ, ನಾಟಕೋತ್ಸವ ಹಾಗೂ ವಿವಿಧ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳನ್ನು ನಡೆಸುವ ಉದ್ದೇಶದಿಂದ ಸಂಘ ಸ್ಥಾಪನೆಯಾಗಿದ್ದು ಸರ್ವ ಸದಸ್ಯರು ಮುಕ್ತವಾಗಿ ಪಾಲ್ಗೊಂಡು ಸಂಘದ ಅಭಿವೃದ್ಧಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಹಿರಿಯ ರಂಗನಿರ್ದೇಶಕರಾದ ರಮೇಶ್ ಭಾಗವತ್, ಕದಂಬ ಸೇನೆ ಅಧ್ಯಕ್ಷ ರಾಜು ಬೇಕರಿ, ನಿವೃತ್ತ ಅಂಚೆ ನೌಕರ ಸಣ್ಣಸ್ವಾಮಿಗೌಡ ಮಾತನಾಡಿದರು. ಸಂಘದ ಅಧ್ಯಕ್ಷ ಜಿ.ಎಲ್.ಹೇಮಂತ್ ಅಧ್ಯಕ್ಷತೆ ವಹಿಸಿದ್ದರು. ವಕೀಲ ಜಿ.ಜಿ.ರವಿ, ಕಾರ್ಯದರ್ಶಿ ಜಿ.ಆರ್.ಚಂದ್ರ, ಉಪಾಧ್ಯಕ್ಷ ವೀರಭದ್ರ, ಅಶೋಕ್, ಗೌರವಾಧ್ಯಕ್ಷ ರಾಜೇಗೌಡ, ದೊಡ್ಡಮ್ಮದೇವಿ ಕಲಾ ಸಂಘದ ಖಜಾಂಚಿ ಬಾಬುಪ್ರಸಾದ್, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಜಯಣ್ಣ ಉಪಸ್ಥಿತರಿದ್ದರು. ರಂಗ ಗೀತೆ ಗಾಯನ ಹಾಗು ರಂಗ ದೃಶ್ಯಾವಳಿ ಏರ್ಪಡಿಸಲಾಗಿತ್ತು.

## ಮಠಗಳ ಅಭಿವೃದ್ಧಿಗೆ ಭಕ್ತರ ಸಹಕಾರ ಅಗತ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಠ ಮಾನ್ಯಗಳು ಬೆಳೆಯಬೇಕಾದರೆ ಭಕ್ತರ ಸಹಾಯ ಅತ್ಯವಶ್ಯಕವಾಗಿದೆ ಎಂದು ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಹೇಳಿದರು.

ಮಠದಲ್ಲಿ ನಡೆದ ಭಕ್ತರ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಡೆದ ಮಠದ ಹಿರಿಯ ಸ್ವಾಮೀಜಿಗಳಾದ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ ಸ್ಮರಣೋತ್ಸವ, ದಾಸೋಹ ಭವನ ಉದ್ಘಾಟನಾ ಸಮಾರಂಭ ಎಲ್ಲರ ನೆರವಿನಿಂದ ಯಶಸ್ವಿಯಾಗಿದೆ. ಕಾರ್ಯಕ್ರಮ ನಡೆಯಲು ಧನಸಹಾಯ ಮಾಡಿದ ಭಕ್ತರಿಗೆ ಕೃತಜ್ಞತೆ ಸಲ್ಲಿಸಿದರು.

ಸಭೆಯಲ್ಲಿ ತಣ್ಣೀರುಹಳ್ಳ ಮಠದ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ.ಪಿ.ಐಸಾಮಿಗೌಡ, ಕಾರ್ಯದರ್ಶಿ ಬಿ.ಎಸ್.



ಕಾಂತರಾಜು, ವಿದ್ಯಾಸಂಸ್ಥೆಯ ಕಾರ್ಯದರ್ಶಿ ಸೋಮಣ್ಣ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಜಿಲ್ಲಾ ಉಪಾಧ್ಯಕ್ಷೆ ಗೀತಾ ಪುಟ್ಟಸ್ವಾಮಿ, ಹಳೆಯ ವಿದ್ಯಾರ್ಥಿಗಳ ಸಂಘದ ಮಲ್ಲಿಕಾರ್ಜುನ, ಸಂಗಮೇಶಯ್ಯ ಮತ್ತಿತರರಿದ್ದರು.

## ತಪ್ಪಿಸಲಾಗದ ಸ್ಥಿತಿ...!



**-ಅಂತೋಣಿ ಮುತ್ತು ವಿ.**
**ಶಿಕ್ಷಕರು ಮೊ.ನಂ. 7259675543**

ಮಾನವ ಜೀವನವು ಅನೇಕ ಕನಸುಗಳು, ಆಸೆ ಮತ್ತು ಯೋಜನೆಗಳಿಂದ ತುಂಬಿರುತ್ತದೆ. ಆದರೆ ಈ ಎಲ್ಲದರ ನಡುವೆ ಒಂದು ಶಾಶ್ವತ ಸತ್ಯ ಅಡಗಿದೆ ಅದೇ ಅನಿವಾರ್ಯತೆ. ಕಾಲದ ಚಲನೆ, ವಯಸ್ಸಿನ ಬದಲಾವಣೆ, ಸುಖ-ದುಃಖಗಳ ಆಗಮನ, ಜಯ-ಪರಾಜಯಗಳ ಅನುಭವ ಮತ್ತು ಅಂತಿಮವಾಗಿ ಮರಣ. ಇವೆಲ್ಲವೂ ಜೀವನದ ಅನಿವಾರ್ಯ ಸಂಗತಿಗಳು. ಮನುಷ್ಯ ಎಷ್ಟೇ ಶಕ್ತಿಶಾಲಿಯಾಗಿರಲಿ, ಎಷ್ಟೇ ಸಂಪತ್ತನ್ನು ಸಂಪಾದಿಸಿರಲಿ ಅಥವಾ ಎಷ್ಟೇ ಉನ್ನತ ಸ್ಥಾನವನ್ನು ಅಲಂಕರಿಸಿರಲಿ, ಪ್ರಕೃತಿಯ ನಿಯಮಗಳನ್ನು ಮೀರಿ ಹೋಗಲು ಸಾಧ್ಯವಿಲ್ಲ. ಇತಿಹಾಸದ ಪುಟಗಳನ್ನು ತೆರೆದರೆ, ಸಾಮ್ರಾಟರಿಂದ ಸಾಮಾನ್ಯ ವ್ಯಕ್ತಿವರೆಗೂ ಎಲ್ಲರೂ ಕಾಲದ ಮುಂದೆ ತಲೆಬಾಗಿರುವುದನ್ನು ಕಾಣಬಹುದು.

ಅನಿವಾರ್ಯತೆಯ ಅರಿವು ನಮಗೆ ವಿನಯ, ಸಹನೆ ಮತ್ತು ಜೀವನದ ನಿಜವಾದ ಮೌಲ್ಯವನ್ನು ಕಲಿಸುತ್ತದೆ. ಕಷ್ಟಗಳು ಬಂದಾಗ ಅವು ಶಾಶ್ವತವಲ್ಲ ಎಂಬ ಭರವಸೆಯನ್ನು ನೀಡುತ್ತದೆ. ಹಾಗೆಯೇ ಯಶಸ್ಸು ಬಂದಾಗ ಅಹಂಕಾರದಿಂದ ದೂರ ಇರಲು ಎಚ್ಚರಿಸುತ್ತದೆ. ಜೀವನದಲ್ಲಿ ಬದಲಾವಣೆ ಅನಿವಾರ್ಯವಾದ್ದರಿಂದ ಪ್ರತಿಯೊಂದು ಕ್ಷಣವನ್ನೂ ಅರ್ಥಪೂರ್ಣವಾಗಿ ಬಳಸುವುದು ನಮ್ಮ ಕರ್ತವ್ಯವಾಗಿದೆ. ಅನಿವಾರ್ಯತೆಯನ್ನು ವಿರೋಧಿಸುವುದಕ್ಕಿಂತ ಅದನ್ನು ಸ್ವೀಕರಿಸಿ, ಅದರೊಂದಿಗೆ ಹೆಜ್ಜೆ ಹಾಕುವವನೇ ನಿಜವಾದ ಜ್ಞಾನಿ. ಹೀಗಾಗಿ ಅನಿವಾರ್ಯತೆ ಎಂಬುದು ಕೇವಲ ಒಂದು ಪದವಲ್ಲ ಅದು ಜೀವನದ ಗಾಢವಾದ ತತ್ವ, ಮನುಷ್ಯನಿಗೆ ವಾಸ್ತವಿಕತೆಯ ದಾರಿಯನ್ನು ತೋರಿಸುವ ದಿವ್ಯ ದೀಪವಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248